ದಿನಾಂಕ 5-09-2018 ರ ಬುಧವಾರ ಬೆಳಗ್ಗೆ 11-00 ಗಂಟೆಗೆ ಸೆಸ್ಕ್, ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು
ಶ್ರೀಮತಿ/ಶ್ರೀಯುತ :

1. ಉಮೇಶ : ಅಇಂ(ವಿ), ಮಂಡ್ಯ ವೃತ್ತ.
2. ಮುಜ್ಹಾಮಿಲ್ ಖಾನ್ : ಕಾನಿಇಂ(ವಿ), ಪಾಂಡವಪುರ ವಿಭಾಗ.
3. ಎಂ.ಪ್ರಕಾಶ್ : ಲೆಕ್ಕಾಧಿಕಾರಿ. ಪಾಂಡವಪುರ ವಿಭಾಗ.
4. ವಿ. ಪುಟ್ಟಸ್ವಾಮಿ : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ.
5. ರೂಪಿಣಿ.ಎಂ.ಎನ್ : ಸಇಂ(ತಾಂ), ಪಾಂಡವಪುರ ಉಪವಿಭಾಗ.
6. ಹೆಚ್.ಇ. ಮಹದೇವ : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ.
7. ಪಾಂಡುರಂಗ.ಹೆಚ್.ಸಿ : ಸಇಂ(ವಿ), ಟಿ.ಎಸ್. ಛತ್ರ ಶಾಖೆ.
8. ಸತೀಶ್ : ಸಇಂ(ವಿ), ಮೇಲುಕೋಟೆ ಶಾಖೆ.
9. ಜಿ. ಪುಷ್ಪ : ಕಿಇಂ(ವಿ), ಚಿನಕುರಳಿ ಶಾಖೆ.
10. ಎ.ಪಿ. ಕಿರಣ್ ಕುಮಾರ್ : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ.
11. ಬಿ. ನಂದೀಶ್ : ಕಿಇಂ(ವಿ), ಬನ್ನಂಗಾಡಿ ಶಾಖೆ.
12. ಎಂ.ಬಿ ಚೆಲುವರಾಜು : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ.
13. ಹೆಚ್.ಪಿ ಮಹೇಶ್ : ಪ್ರ.ಹಿ.ಸ, ಪಾಂಡವಪುರ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

1. ಶ್ರೀ ಸತ್ಯನಾರಾಯಣ, ನೀಲನಹಳ್ಳಿ ಗ್ರಾಮ, ಮೊಬೈಲ್ ನಂ. 948120054

ದೂರು: ಕೃಷಿ ಇಲಾಖೆ ಮತ್ತು ವಿದ್ಯುತ್ ಇಲಾಖೆ ಎರಡೂ ಸೇರಿ ಜಂಟಿಯಾಗಿ ಸಭೆ ನಡೆಸಿ, ರೈತರ ಬೆಳೆಗಳು, ಬೇಕಾಗಿರುವ ನೀರು, ಸಮಯವನ್ನಾಧರಿಸಿ, ಅದರಂತೆ ವಿದ್ಯುತ್ ಸರಬರಾಜು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು, ಹಾಗು TC ಗಳನ್ನು ಗುತ್ತಿಗೆದಾರರ ಹಾವಳಿ ತಪ್ಪಿಸಿ, ಅವಶ್ಯಕತೆ ಇರುವ ಕಡೆ ವಿಳಂಬಮಾಡದೇ ಹಾಕಿಸಬೇಕೆಂದು ಕೋರಿದರು. ಮತ್ತು ವಿವಿದೆಡೆ ನಡೆಯುತ್ತಿರುವ TC ಗಳ ಕಳ್ಳತನವನ್ನು ತಪ್ಪಿಸಬೇಕೆಂದು ಮನವಿಮಾಡಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸ್ಥಳೀಯ ಪೋಲಿಸ್, ಜಾಗೃತದಳ ಮತ್ತು ಇಲಾಖಾ ಸಿಬ್ಬಂದಿಯೊಡನೆ ತಂಡಗಳನ್ನು ರಚಿಸಿ ರಾತ್ರಿ ವೇಳೆ ಗಸ್ತು ನಡೆಸಿ, ಕಳ್ಳತನವನ್ನು ತಪ್ಪಿಸುವಂತೆ ಸೂಚಿಸಿದರು.

2. **ಶ್ರೀ ಕರೀಗೌಡ, ಲಕ್ಷ್ಮೀಸಾಗರ ಗ್ರಾಮ, ಮೊಬೈಲ್ ನಂ. 7829852387.**

ದೂರು: ನಮ್ಮ ಶಾಖೆಯಲ್ಲಿ ಹೆಚ್ಚಾಗಿ ವಿದ್ಯುತ್ ಅಡಚಣೆಯುಂಟಾಗುತ್ತದೆ, ಅದನ್ನು ತಪ್ಪಿಸಿ, ನಿರಂತರ ವಿದ್ಯುತ್ ಪೂರೈಕೆಮಾಡಬೇಕೆಂದರು ಮತ್ತು ಟಿ.ಎಸ್ ಛತ್ರ ಶಾಖೆಯನ್ನು ಸ್ಥಳೀಯವಾಗಿ ತೆರೆದು ಅಲ್ಲೇ ಕಂದಾಯ ವಸೂಲಾತಿಗೆ ಅವಕಾಶಮಾಡಿರೆಂದು ಕೋರಿದರು.

ಕ್ರಮ: ಟಿ.ಎಸ್ ಛತ್ರ ಶಾಖೆಯ ಸಹಾಯಕ ಇಂಜಿನಿಯರ್(ವಿ) ರವರಿಗೆ ಈಗಾಗಲೇ ಕೃಷಿ ಇಲಾಖೆ ಕಟ್ಟಡದಲ್ಲಿ ಶಾಖೆ ತೆರೆಯಲು ಉದ್ದೇಶಿಸಿರುವುದನ್ನು ಆರಂಭಿಸಬೇಕೆಂದು ಅ ಇಇ(ವಿ) ರವರು ಸೂಚಿಸಿದರು ಮತ್ತು ಲೆಕ್ಕಾಧಿಕಾರಿಗಳು ಆ ಗ್ರಾಮ ಪಂಚಾಯಿತಿಯ ಎಂ.ಎಫ್.ಎಫ್ ರವರನ್ನು ಕಂದಾಯ ವಸೂಲಾತಿಯ ದಿನಗಳನ್ನು ಪ್ರಕಟಿಸಿ, ಆ ದಿನಗಳಂದು ಸ್ಥಳೀಯವಾಗಿ ಕಂದಾಯ ವಸೂಲಾತಿಗೆ ಕ್ರಮ ಕೈಗೊಳ್ಳಿರೆಂದು ತಿಳಿಸಿದರು.

3. **ಶ್ರೀ ತಮ್ಮಣ್ಣಗೌಡ, ಚಿನಕುರಳಿ ಗ್ರಾಮ ಮೊಬೈಲ್ ನಂ. 9449802885.**

ದೂರು: ಶ್ರೀ ಜವರೇಗೌಡ ಬಿನ್ ಜವರೇಗೌಡ, ಕಣಿವೆಕೊಪ್ಪಲು ರವರ ಐ.ಪಿ ಸ್ಥಾವರಕ್ಕೆ UNIP ಯೋಜನೆಯಡಿಯಲ್ಲಿ WA ಆಗಿದ್ದು ಇನ್ನು ಕೆಲಸವಾಗಿರುವುದಿಲ್ಲವೆಂದು, ಮನವಿ ಮಾಡಿದರು.

ಕ್ರಮ: ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಒಂದು ವಾರದೊಳಗಾಗಿ ಕೆಲಸ ಮುಗಿಸಿಕೊಡುವುದಾಗಿ ತಿಳಿಸಿದರು.

4. **ಶ್ರೀ ಸಣ್ಣಪ್ಪ, ನಲ್ಲಹಳ್ಳಿ ಗ್ರಾಮ, ಮೊಬೈಲ್ ನಂ. 9591576544.**

ದೂರು: ಕನಗನಮರಡಿ ವ್ಯಾಪ್ತಿಯ ಅರಣ್ಯದಂಚಿನಲ್ಲಿರುವ 63 ಕೆವಿಎ TC ಗೆ FUSE ಹೋದಾಗ ಹಾಕಲು ರೈತರು ಹೋದರೆ, ಅರಣ್ಯದೊಳಗೆ ಪ್ರವೇಶಿಸಲು ಅರಣ್ಯಾಧಿಕಾರಿಗಳು ತಡೆಯೊಡ್ಡುತ್ತಾರೆ, ನಮಗೆ TC ಮತ್ತು DOLO ಅನ್ನು ಸ್ಥಳಾಂತರಿಸಿಕೊಡಿರೆಂದು ಕೋರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಧಿಸಿದ ಶಾಖಾಧಿಕಾರಿಯವರಿಗೆ ಅರಣ್ಯದೊಳಗೆ DOLO ಹಾಕಲು ಲೈನ್‌ಮ್ಯಾನ್‌ಗಳನ್ನು ಕಳುಹಿಸಿಹಾಕಿಸಿರೆಂದರಲ್ಲದೆ, ಸ್ವಯಂ ಕಾರ್ಯನಿರ್ವಹಣಾ ಯೋಜನೆಯಡಿಯಲ್ಲಿ ಹಣ ಪಾವತಿಸಿದಲ್ಲಿ ಕಾಮಗಾರಿ ನಿರ್ವಹಿಸಿಕೊಳ್ಳಬಹುದೆಂದು ತಿಳಿಸಿದರು.

5. **ಶ್ರೀ ಬಸವಲಿಂಗಪ್ಪ, ಹಾಗನಹಳ್ಳಿ ಗ್ರಾಮ, ಮೊಬೈಲ್ ನಂ. 9731923072.**

ದೂರು: ನನ್ನ ಜಮೀನಿನ ವ್ಯಾಪ್ತಿಯಲ್ಲಿರುವ TC ಯನ್ನು ಪಕ್ಕಕ್ಕೆ ಸ್ಥಳಾಂತರಿಸಿಕೊಡಿರೆಂದು ಕೋರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸ್ವಯಂ ಕಾರ್ಯನಿರ್ವಹಣಾ ಯೋಜನೆಯಡಿಯಲ್ಲಿ ಇಲಾಖೆಗೆ ಮೇಲ್ವಿಚಾರಣಾ ಶುಲ್ಕ ಪಾವತಿಸಿ, ನಿರ್ವಹಿಸಿಕೊಳ್ಳಬಹುದೆಂದು ತಿಳಿಸಿದರು.

6. <u>ಶ್ರೀ ಪರಮೇಶ, ಸಿಂಗ್ರಿಗೌಡನಕೊಪ್ಪಲು ಗ್ರಾಮ, ಮೊಬೈಲ್ ನಂ. 9980616966.</u>

<u>ದೂರು:</u> SVY ಯೋಜನೆಯಡಿಯಲ್ಲಿ ನನಗೆ TC ಕೊಡಿಸಿರೆಂದು ಕೋರಿದರು.

<u>ಕ್ರಮ:</u> ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ನೀವು ಕಂಬ ಮತ್ತು ಲೈನ್ ಕೆಲಸ ಮುಗಿಸಿಕೊಂಡುಬಂದಲ್ಲಿ ಒಂದೆರಡು ದಿನದಲ್ಲಿ TC ಕೊಡಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸತ್ತೇನೆಂದು ತಿಳಿಸಿದರು.

7. <u>ಶ್ರೀ ಶಂಕರೇಗೌಡ, ಕಟ್ಟೇರಿ ಗ್ರಾಮ, ಮೊಬೈಲ್ ನಂ. ಇಲ್ಲ.</u>

<u>ದೂರು:</u> ಕಟ್ಟೇರಿ ಗ್ರಾಮ ಪಂಚಾಯಿತಿ ಎದುರಿಗಿರುವ ಕಬ್ಬಿಣದ TC ಸ್ಟ್ರಕ್ಚರ್‌ನ DOLOನ್ನು ಸರಿಪಡಿಸಿ ಕೊಡಿರೆಂದರು.

<u>ಕ್ರಮ:</u> ಸಭೆಯಲ್ಲಿದ್ದ ಕ್ಯಾತನಹಳ್ಳಿ ಶಾಖಾಧಿಕಾರಿಯವರಿಗೆ ವಿಚಾರಿಸಲಾಗಿ, ಪ್ರಸ್ತುತ ಕಬ್ಬಿಣದ TC ಸ್ಟ್ರಕ್ಚರನ್ನು ಸಿಮೆಂಟ್ ಕಂಬ ಹಾಕಿ ಬದಲಿಸಲಾಗುತ್ತಿದ್ದು, ಅಲ್ಲೇ DOLOನ್ನು ಸಹ ಸರಿಪಡಿಸಲಾಗುವುದೆಂದು ತಿಳಿಸಿದರು.

8. <u>ಶ್ರೀ ರಾಜು, ಲಕ್ಷ್ಮೀಸಾಗರಗ್ರಾಮ, ಮೊಬೈಲ್ ನಂ. 8861888706.</u>

<u>ದೂರು:</u> ನಮ್ಮ ಜಮೀನಿನ ಹತ್ತಿರ ಅಳವಡಿಸಿರುವ 25 KVA TC ಯು ಅಧಿಕ ಭಾರದಿಂದಾಗಿ ಸುಟ್ಟು ಹೋಗುತ್ತಿದೆ, 25 KVA TC ಹಾಕಿರೆಂದರು.

<u>ಕ್ರಮ:</u> ಸಭೆಯಲ್ಲಿದ್ದ ಶಾಖಾಧಿಕಾರಿಯವರಿಗೆ ಸ್ಥಳದ ನಕ್ಷೆ, ಭಾರದ ವಿವರ, ಅಧಿಕೃತ ಪಂಪ್ ಸೆಟ್‌ಗಳನ್ನು ಪರಿಶೀಲಿಸಿ, ನಿಯಮಾನುಸಾರವಿದ್ದಲ್ಲಿ 25 KVA ಅಂದಾಜುಪಟ್ಟಿ ಸಲ್ಲಿಸಲು ಸೂಚಿಸಲಾಯಿತು.

9. <u>ಶ್ರೀ ಪ್ರದೀಪ್, ಸಣಾಬ ಗ್ರಾಮ. ಮೊಬೈಲ್ ನಂ. 8431622744.</u>

<u>ದೂರು:</u> ಶ್ರೀ ಹನುಮಯ್ಯ ಬಿನ್ ಹನುಮಯ್ಯ, ಸಣಬ SCP, GK ಯೋಜನೆಯಡಿಯಲ್ಲಿ ಮಂಜೂರಾಗಿ, ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಪಕ್ಕದ ಜಮೀನಿನವರು ತಡೆಯೊಡ್ಡಿದ್ದು, ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಲಾಗಿದ್ದು, ಮಂಜೂರುಮಾಡಿ ಆದಷ್ಟು ಬೇಗ ಕೆಲಸನಿರ್ವಹಿಸಿಕೊಡಿರೆಂದು ಕೋರಿದರು.

<u>ಕ್ರಮ:</u> ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಆದಷ್ಟು ಬೇಗ ಮಂಜೂರುಪಡೆದು ಕೆಲಸ ನಿರ್ವಹಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರಿಗೆ ತಿಳಿಸಿದರು.

ಸಭೆಯಲ್ಲಿದ್ದ ಗ್ರಾಹಕರು ಜನಸಂಪರ್ಕ ಸಭೆಯ ಬಗ್ಗೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಪ್ರಕಟಿಸಿ, ಹೆಚ್ಚಿನ ಗ್ರಾಹಕರಿಗೆ ಮಾಹಿತಿ ಸಿಗಲೆಂದು ಸಲಹೆ ನೀಡಿದರು.

:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/18-19/1532-46 ದಿನಾಂಕ: 10 .09.2018

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.